**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.992/2023.</u>**

ಪಿರ್ಯಾದುದಾರರುಃ- ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ
ಬ್ಯಾಂಕ್ ನಿಯಮಿತ, ಹೊನ್ನಾವರ ,
ಪ್ರತಿನಿಧಿಸುವವರು,
ಶ್ರೀ ಹನುಮಂತ ವಿಷ್ಣು ನಾಯ್ಕ,
ನಿಷ್ಪತ್ ಪ್ರಭಾರಿ ಪ್ರಧಾನ ವ್ಯವಸ್ಥಾಪಕರು,
ತಾಲೂಕುಃ- ಹೊನ್ನಾವರ (ಉ.ಕ.).

**-ವಿರುದ್ಧ-**

ಆರೋಪಿಯ ಹೆಸರುಃ- ವಿನೋದ ಜಟ್ಟಿ ನಾಯ್ಕ,
ಸಾಕೀನಃ- ಮಹಿಮೆ ಪೈಕಿ ಬೈಲಗದ್ದೆ ,
ತಾಲೂಕುಃ- ಹೊನ್ನಾವರ (ಉ.ಕ.).

****

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರನ್ವಯ ಆರೋಪಿಯ ಹೇಳಿಕೆ.</u>**

ಪ್ರಶ್ನೆಃ 1. ನೀವು ಪಿರ್ಯಾದುದಾರರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ- ಕೇಳಿದ್ದೇನೆ.

ಪ್ರಶ್ನೆಃ 2. ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04-08-2016 ರಂದು ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಲ್ಲಿ ಸಾಲದ ಖಾತೆ ಸಂಖ್ಯೆ PL 837 ರಡಿಯಲ್ಲಿ ರೂ.50,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಐಸಿಐಸಿಐ ಬ್ಯಾಂಕ್., ಮಿರ್ಜಾನ್** ಶಾಖೆಯ ನಿಪಿ-1 ರ ಚೆಕ್ ನಂ.001167 ನ್ನು ದಿನಾಂಕ 14-06-2023 ರಂದು ಬಡ್ಡಿಯನ್ನು ಒಳಗೊಂಡಂತೆ ರೂ.82,069/- ಎಂದು ನಮೂದಿಸಿ ಚೆಕ್ ಗೆ ಸಹಿ

ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿರುತ್ತೀರೆಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು.

ಪ್ರಶ್ನೆಃ 3. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆ.ಡಿ.ಸಿ.ಸಿ., ಬ್ಯಾಂಕ್., ಹೊನ್ನಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, "Account Closed" ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 19-06-2023 ರಂದು ನಿಪಿ-3 ರ ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು.

ಪ್ರಶ್ನೆಃ 4. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ,ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 12-07-2023 ರಂದು ನಿಪಿ-4 ರ ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ 24-07-2023 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು.

ಪ್ರಶ್ನೆಃ 5. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-6 ಅಂಚೆ ಇಲಾಖೆಯವರು ನೀಡಿದ ದಾಖಲೆಯನ್ನು ಹಾಜರುಪಡಿಸಿ ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು.

ಪ್ರಶ್ನೆ 6: ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯೇ?

ಆರೋಪಿಯ ಉತ್ತರಃ- ಇದೆ.

ಪ್ರಶ್ನೆ 7: ಸದ್ರಿ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೇ?

ಆರೋಪಿಯ ಉತ್ತರಃ- ಏನು ಇಲ್ಲ.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

**ಸಹಿ ಇದೆ.**

**ದಿನಾಂಕಃ-** 30-01-2025.

**(ಈರಣ್ಣ ಹುಣಶಿಕಟ್ಟಿ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

ಆರೋಪಿಯ ಸಹಿಃ-

**ಸಹಿ ಇದೆ.**

****